ವಾರದ ಸಂಚಿಕೆ

Reg No. M 1299
Daily & Weekly

For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 27 ಸಂಚಿಕೆ 314] ಸೋಮವಾರ 14—6—1943 [3 ಪೈ

ಅಕ್ಕರ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ
ರೆಗೂ ಊಟಕ್ಕೆ ಕೂಡ ಏಳಲು ಮನ
ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇ
ಜು 1 ಆಣೆ. ಮುಂಗಡ ಕಳುಹಿಸಬೇಕು.
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್ ಮೈಸೂರು.

ಯುದ್ಧವಾರ್ತೆ

——

ಮಿತ್ರರು ಒಂದು ಹೊಸ ಸೇನೆ ದಳವನ್ನು ರಣರಂಗಕ್ಕೆ ಸಿದ್ಧಮಾಡಿರುವರು. ಈ ದಳಕ್ಕೆ ನವೀನ ರೀತಿಯಲ್ಲಿ ಸಲಕರಣೆಗಳನ್ನು ಒದಗಿಸುವರು. ಮುಂದೆ ಮುಂದೆ ಹೋಗುವ ಸೇನೆಗಳು ಹಿಂದೆ ಒರತಕ್ಕವರಿಗೆ ತಮ್ಮ ಅನುಭವವನ್ನು ತಿಳಿಸುವರು. ಈ ದಳಕ್ಕೆ ಭಾರಿಭಾರಿಯಾದ ಗುಂಡು, ಬಲವಾದ ವಿಮಾನ ಟ್ಯಾಂಕು ಮೊದಲಾದುವನ್ನು ಕೊಡುವರು.

ಂ ಂ

ಈಗ ಮಿತ್ರರ ಕಣ್ಣು ಸಿಸಲಿದ್ವೀಪದ ಮೇಲೆ ಬಿದ್ದು ಧಾಳಿಗೆ ಪ್ರಾರಂಭಿಸಿದರು. ಅಲ್ಲಿ 76 ಶತ್ರುಗಳ ವಿಮಾನಗಳಿದ್ದವು. ಅವುಗಳಲ್ಲಿ 52 ನ್ನು ನಷ್ಟ ಮಾಡಿದರು.

ಂ ಂ

ಮಿತ್ರರು ಪಾಂಟಲೇರಿಯಾ ಸಮೀಪದಲ್ಲಿದ್ದ ಇಟಲಿಯವರ ಇನ್ನೊಂದು ಸಣ್ಣ ದ್ವೀಪವನ್ನು ಸಹ ಹಿಡಿದುಕೊಂಡಿರುತ್ತಾರೆ. ಒಂದು ಗುಂಡನ್ನೂ ಹಾರಿಸದೆ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು.

ಂ ಂ

ಸಾಲಮ್ಕ ದ್ವೀಪದಲ್ಲಿನ ರಕ್ಷಣೆಯಲ್ಲಿ ಜಪಾನಿಯರ 25 ವಿಮಾನಗಳು ನಾಶಮಾಡಲ್ಪಟ್ಟವು.

ಂ ಂ

ಅಲ್ಜೀರ್ಸಿನಲ್ಲಿನ ಕಮ್ಯೂನಿಸ್ಟರು 6 ಮಂದಿ ಫ್ರೆಂಚರನ್ನು ಬಂಧಿಸಿದರು.

ಯೂರೋಪಿನ ಮೇಲೆ ನಡೆಸುವ ವಿಷಯದಲ್ಲಿ ನಾಯಕತ್ವವನ್ನು ಅಮೇರಿಕಾದವರು ತೆಗೆದುಕೊಂಡರೆ ಜನರಲ್ ಮಾರ್ಷಲರಿಗೆ ಪಟ್ಟಾಸಿಗುವಂತಿದೆ.

ಂ ಂ

ಯುದ್ಧ ಮುಗಿದ ಮೇಲೆ ಪ್ರಪಂಚದವರೆಲ್ಲ ಒಟ್ಟುಗೂಡಿ ಎಂಪೈರ್ ವಿಮಾನ ಶಾಖೆಯನ್ನು ವಿಸರ್ಜಿಸಿರುವರು.

ಂ ಂ

ಇಟಲಿಯವರ ಮಾಲ್ಟಾದಂತಿದ್ದ ಪಾಂಟಲೇರಿಯ ಮಿತ್ರರ ಹಸ್ತಗತವಾದ್ದರಿಂದ ಇನ್ನು ಮುಂದೆ ಇಂಡಿಯಾ ಆಸ್ಟ್ರೇಲಿಯಾಕ್ಕೆ ನೌಕೆಗಳು ಸುಖವಾಗಿ ಓಡಾಡಲು ಅನುಕೂಲವಾಗಬಹುದು.

ಂ ಂ

ಮಿತ್ರರ ವಿಮಾನಗಳು ಹಾಲಿಂಡ್ ಮತ್ತು ಉತ್ತರ ಫ್ರಾನ್ಸಿನ ಮೇಲೆ ಧಾಳಿ ಮಾಡಿದವು.

ಂ ಂ

ಪೆಂಟಲೇರಿಯಾದಲ್ಲಿದ್ದ 6000 ಸಿವಿಲಿಯನ್ನರ ವಿಷಯದಲ್ಲಿ ಮಿತ್ರರು ಅವರಿಗೆ ಬೇಕಾದ ಅನುಕೂಲಗಳನ್ನು ಏರ್ಪಾಡು ಮಾಡಿರುವರು.

ಂ ಂ

ಅಮೇರಿಕಾ ವಿಮಾನಗಳು ಜಪಾನರ ಕಿಸ್ಕಾ ದ್ವೀಪದ ಮೇಲೆ ಧಾಳಿ ಮಾಡಿರುವರು.

ವಿಶೇಷ ವರ್ತಮಾನ

——

ಜೂನ್ 14 ಈ ದಿನವು ಅಮೇರಿಕಾದಲ್ಲಿ ಫ್ಲ್ಯಾಗ್ ದಿವಸವು. ಈ ವರ್ಷ ಇದನ್ನು ಬಹಳ ವಿಜೃಂಭಣೆಯಿಂದ ಆಚರಿಸುವರು. ಈ ಸಂತೋಷಕ್ಕೆ ಈಗ 1—2 ದಿವಸಗಳಿಂದ ಇಟಲಿಯವರ ಪಾಂಟಲೇರಿಯಾ ಲಾಂಪಡ್ಯೂಸ್ ದ್ವೀಪಗಳು ತಮ್ಮ ಹಸ್ತಗತವಾದುದೆ ಕಾರಣವು.

ಂ ಂ

ಮಿತ್ರರಿಗೆ 1943 ರಲ್ಲಿ ಜಯವಾಗುವುದೆಂದು ಓಲ್ಡ್ ಮೂಕ್ ಪಂಚಾಗದಲ್ಲಿ ಬರೆದಿದ್ದರು. ಇದನ್ನು ಬರ್ಲೆಂಡಿನಲ್ಲಿ ಬಹಿಷ್ಕಾರ ಹಾಕಿದರು. ಆ ಮಾತುಗಳನ್ನು ತೆಗೆದುಹಾಕಿ ಬೇರೆ ಮುದ್ರಣ ಮಾಡಿ ಅಲ್ಲಿಗೆ ಕಳಿಸಬೇಕಾಯಿತು.

ಂ ಂ

ಜಪಾನಿಗರು ಚೀನೀಯರ ರಾಜಧಾನಿಯಾದ ಚುಂಕಿಂಗ್ ಮುತ್ತಲು ಹೊರಿಟರು ಚೀನಿಯರು ಅಮೇರಿಕಾದಲ್ಲಿ ತರ್ಪೇತರಾದ ವಿಮಾನಿಕರು ಜಪಾನಿಯರನ್ನು ಹೆಸರು ಹೇಳದಹಾಗೆ ಮಾಡಿಬಿಟ್ಟರು. ಈಗ ಚೀನೀಯರಿಗೆ ಅಮೇರಿಕಾದಿಂದ ವಿಮಾನಗಳು ಬರುತ್ತಿವೆ. ಹಿಂದೆ ಈಗಿನಂತೆ ಸಹಾಯ ಒದಗಿದ್ದರೆ ಅವರು ಇಷ್ಟು ಕಷ್ಟ ಪಡಬೇಗಾಗಿರಲಿಲ್ಲ. ಇನ್ನು ಇವರಿಗೆ ಜಪಾನಿ ಭಯವಿಲ್ಲ :

ಂ ಂ

ಕಲ್ಕತ್ತಾದಲ್ಲಿ ಬಾಡಿಗೆ ಜಾಸ್ತಿ ಮಾಡದ ಹಾಗೆ ಒಂದು ಕಾನೂನು ಇಷ್ಟರಲ್ಲೇ ಜಾರಿಗೆ ಬರುವುದು.

ಂ ಂ

ಪುದರಾಸಿನಲ್ಲಿ ಅಕ್ಕಿಯ ಬೆಲೆ ದಿನಕ್ಕೆ 4725 ಚೀಲಗಳೆಂದು ಸರ್ಕಾರದವರು ಹೇಳುತ್ತಾರೆ

ಹೆಂಡ ಕುಡಿಯುವದರಿಂದ ಯಾವ ಒಗೆಯ ಅನರ್ಥಗಳು ಅಮೇರಿಕಾದಲಿ ಒಂದು ಪಾಠಶಾಲೆಯನ್ನು ವಿಸರ್ಜಿಸಿರುವರು. ಇಂಥಾ ಪಾಠಶಾಲೆ ಇದುವರಿಗೆ ಪ್ರಪಂಚದಲ್ಲಿ ಎಲ್ಲೂ ವಿಸರ್ಜಾಡಾಗಿರಲಿಲ್ಲ.

ಂ ಂ

ಶ್ರೀಮತಿ ಇಂದಿರಾ ಗಾಂಧಿಯವರ ಮೇಲಿದ್ದ ಪ್ರತಿಬಂಧಕಾಜ್ಞೆಯನ್ನು ಸರ್ಕಾರದವರು ತೆಗೆದುಹಾಕಿರುವರು.

ಂ ಂ

ಇದುವರೆಗೆ ಜರ್ಮನಿಯವರು ಅರ್ಜೀರಿಯಾದಿಂದ ಸಮಾಜಾತವನ್ನು ಗುಪ್ತ ರೀತಿಯಲ್ಲಿ ಕಳುಹಿಸಿ ಅದರಿಂದ ಅಮೆರಿಕ ನಾವೆಗಳು ಮುಳುಗಲು ಅನುಕೂಲವಾಗುತ್ತಿತ್ತು. ಇನ್ನು ಮೇಲೆ ನಾಜಿಗಳು ಕೋಡ್ ತಂತಿಯನ್ನು ಕಳಿಸಕೂಡದೆಂದು ಅರ್ಜಂಟೈನಾ ಸರ್ಕಾರದವರು ಅಜ್ಞೆ ಮಾಡಿರುತ್ತಾರೆ.

ಂ ಂ

ಲಂಡನ್ ಮೇಲೆ ಶತ್ರುಗಳ ಭಯಂಕರವಾದ ಶಿಡಿಮದ್ದನ್ನು ಹಾಕಿದರು.

ಕಾಂಗ್ರೆಸ್ ನಾಯಕರು ಬಂಧನದಲ್ಲಿರುವಾಗ ಅನೇಕ ಕಡೆ ಮಂತ್ರಿಮಂಡಲ ಸ್ಥಾಪನೆ ಮಾಡುವುದು ಸರಿಯಲ್ಲ. ಕಾಂಗ್ರೆಸ್ ನಾಯಕರನ್ನು ಬಿಡಿ, ಎಂದು ಸರ್ವೆಂಟ್ ಆಫ್ ಇಂಡಿಯಾದ ಪಂಡಿತ ಕುಂಸ್ರೂರವರು ಹೇಳುತ್ತಾರೆ.

ಂ ಂ

ಬೆಲ್ಗ್ರೇಡಿನಲ್ಲಿ ಬೀದಿಗಳಲ್ಲಿ ಮಾರಾಮಾರಿಯಾಗಿ ಅನೇಕ ಜರ್ಮನರು ಸತ್ತರು. ಇದಕ್ಕಾಗಿ 800 ಮಂದಿಯನ್ನು ನಾಜಿಗಳು ದಸ್ತಗಿರಿ ಮಾಡಿರುತ್ತಾರೆ.

ಂ ಂ

ಉತ್ತರ ಆಫ್ರಿಕಾದಿಂದ ಕೈಸೆರೆ ಸಿಕ್ಕಿದ ಜರ್ಮನ್ ಸೇನೆಗಳ ಪೈಕಿ ಕೆಲವರಿಂದ ಅಮೇರಿಕಾದಲ್ಲಿ ಡೆಸಿಪರ್ಟ್ ಆಗಿಕಟ್ಟಿಸುವ ಟಿಕ್ಸಾಸಿನಲ್ಲಿ ಒಂದು ಭಾರಿ ಕೆರೆಯನ್ನೂ ಕಟ್ಟಿಸಿದ್ದಾರೆ.

ವಿವಿಧ ವಿಷಯ

ಪುಟಾಜೂ ವಿಶ್ವವಿದ್ಯಾಸಿಲಯವನವರು ಒಬ್ಬ ವ ದ ಕಿಗೆ ಎಂ. ಬಿ ಎಲ್. ಡಿಗ್ರಿಯನ್ನು ಕೊಟ್ಟರುವರು. ಇದಕ್ಕಾಗಿ ಯೇ ಒಂದು ಕಾರ್ಖಾನೋಕೇಷನ್ ಏರ್ಪಡಿಸಿದ್ದರು. ಇಷ್ಟೇಕೆ ? ನಮ್ಮ ರಾಜಧಾನಿಯಲ್ಲಿ ಒಬ್ಬ ಮಹಿಳೆಯು ರಿಟೈರಾದ ಮೇಲೆ ಬಿ ಎ ಡಿಗ್ರಿ ತೆಗೆದುಕೊಳ್ಳಲಿಲ್ಲವೇ ?

ಯೋಟ್‌ವಲ್ಲಿ ಸಂಬಳ ಜಾಸ್ತಿ ಮಾಡಲಿಲ್ಲವೆಂದು ಉಪಾಧ್ಯಾಯರು ಉಪವಾಸವನ್ನಾಚರಿಸುತ್ತಿರುವರು.

ಈಗ ಅಮೇರಿಕಾದವರು ಒಂದು ಬಗೆಕನ್ನಡಿಯನ್ನು ತಯಾರ್ಮಾಡಿರುವರು. ಇದನ್ನು ಹಾಕಿಕೊಂಡರೆ ಸೂರ್ಯರಶ್ಮಿ ಬಾಧಕವಿಲ್ಲವಂತೆ. ಸೈನಿಕರು ಇದನ್ನು ಧರಿಸಿಕೊಂಡು ಅಂತರಿಕ್ಷದಲ್ಲಿ ಶತ್ರುಗಳ ವಿಮಾನವನ್ನು ನೋಡಬಹುದು.

ಲಡಾಂನ್ನಿನಲ್ಲಿ ವಿಮಾನಧಾಳಿ ಅಭ್ಯಾಸದಲ್ಲಿ ಒಬ್ಬ ಹುಡುಗಿಯು ಅಯಾಸಗೊಂಡಳು. ಆಗ ಅಲ್ಲಿದ್ದವರು ಅವಳಿಗೆ ಒಂದು ಕಪ್ಪು ಟೀಯನ್ನು ಕೊಟ್ಟರು. ಅವಳು ಟೀಯನ್ನು ಕುಡಿದು ನೆಗೆಯುತ್ತಾ, 'ನಾನು ಇಷ್ಟೊಂದು ಸಲ ವಾರ್ಫೇರ್‌ಗೊಳ್ಳಲಿಲ್ಲ, ನನಗೆ ಮತ್ತೊಂದು ಸಲ ಟೀ ಸಿಗುವುದು, ನನಗೆ ಮನೆಯಲ್ಲಿ ನಮ್ಮ ತಾಯಿಯು ಟೀಯನ್ನು ಕೊಡುವುದಿಲ್ಲ' ಎಂದಳು !

ಒಂದು ಛತ್ರಿಯನ್ನು 1772 ರಲ್ಲಿ ಭಾರತದಿಂದ ಅಮೇರಿಕಾಕ್ಕೆ ತರಿಸಿಕೊಂಡು, ನಂತರ ಅಲ್ಲಿ ತಯಾರುಮಾಡುವುದನ್ನು ಕಲಿತಕೊಂಡರು.

ಸ್ಯೂಯಾರ್ಕಿನಲ್ಲಿ ಶ್ರೀಪಂತರು ನಾಯಿಯನ್ನು ಸತ್ತಮೇಲೆ ಹೂಳಿ ಗೋರಿ ಕಟ್ಟಿಸಿದರು. ಈ ಗೋರಿಗೆ ಉಸ್ತುವಾರಿಗೆ ವರ್ಷಕ್ಕೆ 6000 ರೂಪಾಯಿ ಕೊಡುವರು.

ಭೂಮಿಯೊಳಗೆ 4 ಮೈಲಿ ಸುರಂಗ ಕೊರೆದು ಮತ್ತೊಂದು ಹೊಸ ದಾರಿಯನ್ನು ರಷ್ಯನರು ತಯಾರ್ಮಾಡುತ್ತಿರುವರು. ಇದು ಮಾಸ್ಕೋದಿಂದ ಕಾರ್ಖಾನೆಗಳಿರುವ ಸ್ಥಳಕ್ಕೂ ಸ್ಪಾಲಿಕ್ ಮೋಟಾರು ಕಾರ್ಖಾನೆಗೂ ಹೋಗಬಹುದಾಗಿದೆ. ಇದು ಈಚೆಗೆ ಕೂಲಿಗಾರರು ಓಡಾಡಲು ಬಟ್ಟಾಗ ತಿಳಿಯಿತು. ಇದನ್ನು ತಯಾರುಮಾಡುವಾಗ ಯಾರಿಗೂ ತಿಳಿಯದಹಾಗೆ ಬಹಳ ರಹಸ್ಯವಾಗಿಟ್ಟಿದ್ದರು. ಮಾಸ್ಕೋದಿಂದ ಈ ನಗರಕ್ಕೆ ಇದು ಮೂರನೇ ರಸ್ತೆಯು.

ಭಾರತದಲ್ಲಿ ಉಪಯೋಗಿಸುವಷ್ಟು ತೆಂಗಿನ ಕಾಯನ್ನು ಪ್ರಪಂಚದಲ್ಲಿ ಮತ್ತೆಲ್ಲಿಯೂ ಉಪಯೋಗಿಸುವುದಿಲ್ಲ. 15 ಲಕ್ಷ ಎಕರೆಗಳಲ್ಲಿ ಈ ದೇಶದಲ್ಲಿ ಬೆಳೆಯುವ ಫಲವನ್ನು ನಮ್ಮವರೇ ಉಪಯೋಗಿಸುವರು.

ಆಫ್ರಿಕಾದ ಡರ್ಬನ್ನಿನಲ್ಲಿ ಒಬ್ಬ ಕರಿಮನುಷ್ಯನಿಗೆ 3 ಕಾಲುಗಳಿವೆ. ಹೆಚ್ಚಿನ ಕಾಲು ಸ್ವಲ್ಪ ವೋಕಾಗಿದೆ. ಆದರೂ ಯಾವ ತೊಂದರೆಯೂ ಇಲ್ಲದೆ ನಡೆಯುವನು, ಇವನನ್ನು 100 ಮಂದಿ ವೈದ್ಯರು ಪರೀಕ್ಷಿಸಿದರು.

ಚೀನೀಯರು ಯಾಂಗೆಟೀಸ್ ನದಿಯ ಮೇಲಿರುವ ಸುಂಗ್ಸೆ ನಗರವನ್ನು ಜಪಾನಿಯರಿಂದ ತೆಗೆದುಕೊಂಡರು.

ಪೆಹಲಿಯಲ್ಲಿ ಒಂದು ಕೋತಿಯ ಮೃತಪಟ್ಟಿತು. ಇದನ್ನು ದಫನ್ ಮಾಡುವದಕ್ಕೆ ಮುಂಚೆ ಬೀದಿಬೀದಿಗಳಲ್ಲಿ ಮೆರವಣಿಗೆ ಮಾಡಿದರು. ಸಾವಿರಾರು ಜನರು ಶವದ ಹಿಂದೆ ವ್ಯಸನಾಕ್ರಾಂತರಾಗಿ ಹೋಗಿದ್ದರು. ಎರಡು ಜೊತೆ ಒಲಗದವರು ವ್ಯಸನಕರವಾದ ರಾಗವನ್ನು ಊದುತ್ತಾ ಹೋದರು.

ಇಂಗ್ಲೆಂಡಿನಲ್ಲಿರತಕ್ಕ ಎಲ್ಲಾ ಕಲಾನಿಧಿಗಳನ್ನು 300 ಆಡಿ ಹಳ್ಳ ತೆಗೆದು ಭದ್ರಪಡಿಸುತ್ತಾರೆ.

New Opera Talkies — Aryamala

ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ & ಶಕುಂತಲ ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು

ಆರ್ಯಮಾಲಾ

ತಮಿಳು ಚಿತ್ರ

5th Week

ನೇವಾರ

Ranjit — — Satyabhama

ರಣಜಿತ್ ಟಾಕೀಸ್

ಪೈ ವಿ ರಾವ್, ಪುಷ್ಪವಲ್ಲಿ ಪಾತ್ರವಹಿಸಿರುವ

2nd Week

ಸತ್ಯಭಾಮಾ [ತೆಲುಗು]

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ OR [Violinist]

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಮೈಸೂರು ವೈಶ್ಯ ಪತ್ರಿಕೆ

ಉತ್ತಮ ಸಚಿತ್ರ ಕನ್ನಡ ತೆಲುಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ಈಗಿಗ ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿ 4 ಆಣೆ.

ಹಿಂಬಾಧಮ್ಸ್ ರೈಲ್ವೆ ಬುಕ್‌ಸ್ಟಾಲ್ ನಲ್ಲಿಯೂ ಪತ್ರಿಕೆಯು ತೊರೆಯುತ್ತೆ.

ಕಾರ್ಯಾಲಯ ;

ಶ್ರೀ ವಾಸವಾಂಬ ಭವನ

ಅಶೋಕ ರಸ್ತೆ — ಮೈಸೂರು

For good printing

Saraswati PrintingPress

Lansdowne Buildings, Mysore

Lakshminarasimha Press

Srirampet, Mysore

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಅಕ್ಷಿಸುಧಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವದ

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ ಬೆಲೆ 1 ರೂಪಾಯಿ